# ಮಾಧ್ಯಮಿಕ ಶಿಕ್ಷಣದ ಗುರಿಗಳು

ಶಿಕ್ಷಣವನ್ನು ಕುರಿತ ಅನೇಕ ಪುಸ್ತಕಗಳಲ್ಲಿ ಮತ್ತು ಸಮಿತಿಗಳು ಹಾಗೂ ಆಯೋಗಗಳ ವರದಿಗಳಲ್ಲಿ ಶಿಕ್ಷಣದ ಗುರಿಗಳನ್ನು ಸಾಮಾನ್ಯವಾದ ರೀತಿಯಲ್ಲಿ ನಿರೂಪಿಸಲಾಗಿದೆ. ಹಾಗಾಗಿ, ಈ ಸಾಮಾನ್ಯ ಗುರಿಗಳಿಗೆ ಸಂಬಂಧಿಸಿದಂತೆ ಆಗಾಗ ವ್ಯಕ್ತಪಡಿಸಲಾದ ಅಭಿಪ್ರಾಯಗಳಿಗೆ ಮಹತ್ತ್ವವಾದ ಏನನ್ನೂ ಸೇರಿಸಲು ಸಾಧ್ಯವಿಲ್ಲದಂತಾಗಿದೆ. ಆದರೆ, ನಮ್ಮ ರಾಷ್ಟ್ರವು ಈಗಿರುವ ಪರಿಸ್ಥಿತಿಯಲ್ಲಿನ ಅಗತ್ಯಗಳು ಮತ್ತು ಚಿಂತನೆಗಳ ಕಡೆಗೆ ವಿಶೇಷ ಒತ್ತನ್ನು ನೀಡುವುದರೊಂದಿಗೆ, ಇನ್ನೂ ಹೆಚ್ಚಿನ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಈ ಗುರಿಗಳನ್ನು ನಿರೂಪಿಸಲು ಅವಕಾಶವಿದೆ ಎಂಬುದರಲ್ಲಿ ಯಾವ ಅನುಮಾನವಿಲ್ಲ. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು ಬದಲಾದಂತೆ ಮತ್ತು ಹೊಸ ಸಮಸ್ಯೆಗಳು ಉದ್ಭವಿಸಿದಂತೆ, ಪ್ರತಿಯೊಂದು ನಿರ್ದಿಷ್ಟ ಘಟ್ಟದಲ್ಲಿ ಶಿಕ್ಷಣವು ಯಾವ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂಬುದನ್ನು ಅತ್ಯಂತ ಎಚ್ಚರಿಕೆಯಿಂದ ಮರುಪರಿಶೀಲನೆ ಮಾಡಬೇಕಾದ ಮತ್ತು ಸ್ಪಷ್ಟವಾಗಿ ಮರು-ಮಂಡನೆ ಮಾಡಬೇಕಾದ ಅಗತ್ಯವಿದೆ. ಎಲ್ಲಕ್ಕಿಂತ ಮಿಗಿಲಾಗಿ, ಈ ಹೇಳಿಕೆಯು ಕೇವಲ ಈಗಿನ ಪರಿಸ್ಥಿತಿಯ ಸತ್ಯಾಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಮಾತ್ರವಲ್ಲದೆ ಅದರ ಅಭಿವೃದ್ಧಿಯ ಮಾರ್ಗ ಮತ್ತು ಭವಿಷ್ಯದಲ್ಲಿ ನಾವು ಪ್ರಾಶಸ್ತ್ಯ ನೀಡಬೇಕಾದ ಸಾಮಾಜಿಕ ವ್ಯವಸ್ಥೆಯ ಸ್ವರೂಪ ಮತ್ತು ಪ್ರಕಾರದ ಬಗೆಗೂ ಗಮನಹರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿಯೇ ನಮ್ಮ ಶಿಕ್ಷಣವನ್ನು ನಾವು ಸಜ್ಜುಗೊಳಿಸಬೇಕು.

## ಪ್ರಜಾಸತ್ತಾತ್ಮಕ ಭಾರತದ ಶೈಕ್ಷಣಿಕ ಅಗತ್ಯಗಳು:

ನಾವು ಗಮನಹರಿಸಬೇಕಾದ ಅತ್ಯಂತ ಮಹೋನ್ನತವಾದ ಹಾಗೂ ಶೈಕ್ಷಣಿಕವಾಗಿ ಪ್ರಸ್ತುತವಾದ ಅಂಶಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ಹೇಳಬಹುದು. ಭಾರತವು ಇತ್ತೀಚೆಗಷ್ಟೇ ತನ್ನ ರಾಜಕೀಯ ಸ್ವಾತಂತ್ರ್ಯವನ್ನು ಪಡೆದುಕೊಂಡಿದೆ ಮತ್ತು ಎಲ್ಲ ಜಾಗರೂಕ ಪರಿಗಣನೆಯ ಬಳಿಕ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರೂಪಾಂತರ ಹೊಂದಲು ನಿರ್ಧರಿಸಿದೆ. ಅಂದರೆ ಶೈಕ್ಷಣಿಕ ವ್ಯವಸ್ಥೆಯು ನಮ್ಮ ಹವ್ಯಾಸಗಳು, ನಡವಳಿಕೆಗಳು ಮತ್ತು ಗುಣಲಕ್ಷಣಗಳ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆಯನ್ನು ನೀಡಬೇಕು. ಇವು, ಪ್ರಜಾಸತ್ತಾತ್ಮಕ ಪೌರತ್ವದ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದು ಮತ್ತು ವಿಶಾಲ, ರಾಷ್ಟ್ರೀಯ ಮತ್ತು ಜಾತ್ಯತೀತ ಮನೋಭಾವದ ಬೆಳವಣಿಗೆಗೆ ಅಡ್ಡಿಯುಂಟುಮಾಡುವ ವಿಭಜನಾ ಪ್ರವೃತ್ತಿಗೆ ಪ್ರತಿರೋಧ ತೋರುವುದು ನಿಜಕ್ಕೂ ಮೌಲ್ಯಯುತವಾದ ಕೆಲಸ ಎಂಬ ಭಾವನೆ ಬೆಳೆಯುವಂತೆ ಮಾಡುತ್ತವೆ. ಎರಡನೆಯದಾಗಿ, ನಮ್ಮಲ್ಲಿ ಸಮೃದ್ಧ ಸಂಪನ್ಮೂಲಗಳು ಇದ್ದರೂ ಕೂಡ ಭಾರತ ಈಗಿನ ಸ್ಥಿತಿಯಲ್ಲಿ ನಿಜಕ್ಕೂ ಬಡರಾಷ್ಟ್ರ; ದೇಶದ ಬಹುತೇಕ ಜನ ಆರ್ಥಿಕವಾಗಿ ತೀರ ಹೀನಾಯ ಸ್ಥಿತಿಯಲ್ಲಿದ್ದಾರೆ. ಇವುಗಳಲ್ಲಿ ಅತ್ಯಂತ ತುರ್ತಿನ ಸಮಸ್ಯೆಗಳಲ್ಲಿ ಒಂದೆಂದರೆ ಉತ್ಪಾದಕತೆಯ ದಕ್ಷತೆಯನ್ನು ಸುಧಾರಿಸಿ, ರಾಷ್ಟ್ರೀಯ ಸಂಪತ್ತನ್ನು ಹೆಚ್ಚಿಸುವ ಮೂಲಕ ಜನರ ಜೀವನದ ಗುಣಮಟ್ಟವನ್ನು ಗಣನೀಯವಾಗಿ ಸಂವರ್ಧಿಸುವುದು. ಮೂರನೆಯದಾಗಿ, ಇಷ್ಟೊಂದು ದುರ್ಭರ ಹಾಗೂ ವ್ಯಾಪಕವಾಗಿರುವ ಬಡತನದ ಕಾರಣದಿಂದಾಗಿ ಶೈಕ್ಷಣಿಕ ಸವಲತ್ತುಗಳಲ್ಲಿ ಗಂಭೀರ ಸ್ವರೂಪದ ಕೊರತೆಗಳಿವೆ ಮತ್ತು ಬಹಳಷ್ಟು ಜನರು ಜೀವನ ಸಾಗಿಸುವ ಸಮಸ್ಯೆಗಳಲ್ಲಿಯೇ ಮುಳುಗಿಹೋಗಿದ್ದಾರೆ. ಹಾಗಾಗಿ, ಸಾಂಸ್ಕೃತಿಕ ಅನುಸರಣೆಗಾಗಲಿ, ಇತರ ಚಟುವಟಿಕೆಗಳಿಗಾಗಲಿ ಸಾಕಷ್ಟು ಗಮನವನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಈ ಎಲ್ಲ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಉತ್ತೇಜನ ನೀಡುವಂತಹ ರೀತಿಯಲ್ಲಿ ಶೈಕ್ಷಣಿಕ ವ್ಯವಸ್ಥೆಗೆ ಹೊಸ ದಿಗ್ದರ್ಶನ ನೀಡುವ ಅಗತ್ಯವಿದೆ.

ಸದ್ಯದ ಪರಿಸ್ಥಿತಿಯ ಪ್ರಮುಖ ಅಗತ್ಯಗಳ ಬಗೆಗಿನ ರೂಪರೇಖಾತ್ಮಕವಾದ ವಿಶ್ಲೇಷಣೆಯಿಂದ ಸ್ಪಷ್ಟವಾಗುವ ಒಂದು ಅಂಶ ಏನೆಂದರೆ, ಈ ವಿಶಾಲ ವಿಭಾಗಗಳಿಗೆ ಸಂಬಂಧಿಸಿದಂತೆ ನಾವು ನಮ್ಮ ಗುರಿಯನ್ನು ವ್ಯವಸ್ಥಿತಗೊಳಿಬೇಕಿದೆ. ಹೊರಹೊಮ್ಮುತ್ತಿರುವ ಪ್ರಜಾಸತ್ತಾತ್ಮಕ ಸಾಮಾಜಿಕ ವ್ಯವಸ್ಥೆಯಲ್ಲಿ ಸಕ್ರಿಯ ಪ್ರಜೆಗಳಾಗಿ ಭಾಗಿಯಾಗುವಂತೆ ಮಾಡಲು ವಿದ್ಯಾರ್ಥಿಗಳಿಗೆ ಉತ್ತಮ ನಡವಳಿಕೆಯ ತರಬೇತಿ ನೀಡಬೇಕಾಗುತ್ತದೆ. ಅವರಲ್ಲಿ ಪ್ರಾಯೋಗಿಕ ಹಾಗೂ ವೃತ್ತಿಪರವಾದ

ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ ಅವರು ತಮ್ಮ ರಾಷ್ಟ್ರದ ಆರ್ಥಿಕ ಪ್ರಗತಿಯಲ್ಲಿ ಪಾತ್ರವಹಿಸಲು ಸಾಧ್ಯವಾಗುತ್ತದೆ; ಇಷ್ಟು ಮಾತ್ರವಲ್ಲದೆ ಆತ್ಮಾಭಿವ್ಯಕ್ತಿಗೆ ಹಾಗೂ ಮಾನವೀಯ ವ್ಯಕ್ತಿತ್ವವನ್ನು ಸಮಗ್ರವಾಗಿ ಬೆಳೆಸಿಕೊಳ್ಳಲು ಅತ್ಯಗತ್ಯವಾದ ಸಾಹಿತ್ಯ, ಕಲೆ ಮತ್ತು ಸಾಂಸ್ಕೃತಿಕ ಆಸಕ್ತಿಗಳನ್ನು ಬೆಳೆಸಿಕೊಳ್ಳಬೇಕು. ಇವುಗಳನ್ನು ಹೊರತುಪಡಿಸಿದಲ್ಲಿ, ಜೀವಂತವಾದ ರಾಷ್ಟ್ರೀಯ ಸಂಸ್ಕೃತಿಗೆ ಅಸ್ತಿತ್ವವಿರುವುದಿಲ್ಲ. ಇಲ್ಲಿ ಪ್ರಸ್ತಾವಿಸಿದ ಅಂಶಗಳು ಇನ್ನಷ್ಟು ನಿರ್ದಿಷ್ಟವಾದ ರೀತಿಯಲ್ಲಿ ಪರಿಣಾಮಗಳನ್ನು ಬೀರುತ್ತವೆ ಎಂಬುದನ್ನು ಸೂಚಿಸಲು ಅವುಗಳಲ್ಲಿನ ಪ್ರತಿಯೊಂದನ್ನೂ ಸಂಕ್ಷಿಪ್ತವಾಗಿ ಪರಿಗಣಿಸಲು ನಾವು ಉದ್ದೇಶಿಸಿದ್ದೇವೆ.

ಪ್ರಜಾಸತ್ತಾತ್ಮಕ ಪೌರತ್ವದ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ:

ಪ್ರಜಾಪ್ರಭುತ್ವದಲ್ಲಿ ಪೌರತ್ವ ಎನ್ನುವುದು ಅತ್ಯಂತ ನಿರ್ಬಂಧಕರವಾದ (exacting) ಹಾಗೂ ಸವಾಲಿನ ಜವಾಬ್ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಪ್ರಜೆಯನ್ನೂ ಜಾಗರೂಕತೆಯಿಂದ ಸಿದ್ಧಪಡಿಸಬೇಕಾಗಿದೆ. ಈ ಪ್ರಕ್ರಿಯೆಯಲ್ಲಿ ಅನೇಕ ಬೌದ್ಧಿಕ, ಸಾಮಾಜಿಕ ಮತ್ತು ನೈತಿಕ ಗುಣಗಳು ಒಳಗೊಂಡಿರುತ್ತವೆ; ಅವೆಲ್ಲವೂ ತಾವಾಗಿಯೇ ಒಡಮೂಡುತ್ತವೆ ಎಂದು ನಿರೀಕ್ಷಿಸಲು ಸಾಧ್ಯವಿಲ್ಲ. ಯಾವುದೇ ರೀತಿಯ ಅನುಶಾಸಿತ ಸಾಮಾಜಿಕ ವ್ಯವಸ್ಥೆಯಲ್ಲಿ, ಯಾವುದೇ ವ್ಯಕ್ತಿ ಸ್ವತಂತ್ರ ಆಲೋಚನೆಯ ಸಂಕಷ್ಟದಲ್ಲಿ ಭಾಗಿಯಾಗಬೇಕಾದ ಅಥವಾ ತನ್ನದೇ ಆದ ದಾರಿಯಲ್ಲಿ ಸಾಗಬೇಕಾದ ಅಗತ್ಯವಿರುವುದಿಲ್ಲ. ಇಂತಹ ಕಠಿಣ ಜವಾಬ್ದಾರಿಯಿಂದ ಅವನನ್ನು ಅಧಿಕಾರಿಗಳು ಮುಕ್ತಗೊಳಿಸಿದ್ದಾರೆ! ಆದರೆ ಪ್ರಜಾಪ್ರಭುತ್ವದಲ್ಲಿ ಹಾಗಾಗುವುದಿಲ್ಲ; ವಿಚಾರರಹಿತ ಮತ ಚಲಾವಣೆಯ ಪರಿಣಾಮವನ್ನು ಆತನೇ ಅನುಭವಿಸಬೇಕಾಗುತ್ತದೆ. ವ್ಯಕ್ತಿಯು ಎಲ್ಲ ರೀತಿಯ ಸಂಕೀರ್ಣ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಗತಿಗಳ ಕುರಿತಂತೆ ತನ್ನದೇ ಆದ ಸ್ವತಂತ್ರ ತೀರ್ಮಾನಗಳನ್ನು ಕೈಗೊಳ್ಳತಕ್ಕದ್ದು ಮತ್ತು ಬಹುತೇಕವಾಗಿ ತನ್ನ ಸ್ವಂತ ಕಾರ್ಯವಿಧಿಗಳನ್ನು ನಿರ್ಧರಿಸತಕ್ಕದ್ದು. ಬಹುತೇಕ ಪ್ರಜೆಗಳ ಎಲ್ಲ ಔಪಚಾರಿಕ ಶಿಕ್ಷಣವನ್ನು ಕೊನೆಗೊಳಿಸುವ ಮಾಧ್ಯಮಿಕ ಶಿಕ್ಷಣವು ಈ ಉದ್ದೇಶಕ್ಕಾಗಿ ಅಗತ್ಯವಾದ ತರಬೇತಿ ನೀಡುವ ಜವಾಬ್ದಾರಿಯನ್ನು ಹೊರಬೇಕು. ಈ ನಿಟ್ಟಿನ ಮೊದಲ ಅಗತ್ಯವೆಂದರೆ, ಸ್ಪಷ್ಟ ಯೋಚನೆಯ ಸಾಮರ್ಥ್ಯ ಹಾಗೂ ಹೊಸ ಚಿಂತನೆಗಳ ಗ್ರಹಿಕೆಯನ್ನು ಬೆಳೆಸಿಕೊಳ್ಳುವುದು. ಬೌದ್ಧಿಕ ದೃಷ್ಟಿಯಿಂದ, ಶಿಕ್ಷಿತ ಮನಸ್ಸಿನ ಹೆಗ್ಗುರುತಾಗಿರುವ ಇಂತಹ ಗುಣಮಟ್ಟವನ್ನು ಸೃಜಿಸುವಲ್ಲಿ ಶಾಲೆಯು ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು. ಪ್ರಜಾಪ್ರಭುತ್ವದಲ್ಲಿ ಅಸ್ತವ್ಯಸ್ತವಾಗಿ ಯೋಚನೆಮಾಡುವ ವ್ಯಕ್ತಿಗಳಿಂದ ಪ್ರಗತಿಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಮಾತ್ರವಲ್ಲದೆ, ಅದನ್ನು ಕಾಯ್ದುಕೊಳ್ಳಲೂ ಸಾಧ್ಯವಾಗುವುದಿಲ್ಲ. ಏಕೆಂದರೆ ಇದು ಅಭೂತಪೂರ್ವವಾಗಿ ಪ್ರಬಲವಾಗಿರುವ ಸಮೂಹ ಸಂವಹನದ ಮಾಧ್ಯಮ ಹಾಗೂ ಪ್ರಚಾರವನ್ನು ತಮ್ಮ ಹಿಡಿತದಲ್ಲಿ ಇರಿಸಿಕೊಂಡಿರುವ ಜನನಾಯಕನಿಂದ ಅಡ್ಡದಾರಿ ಹಿಡಿಯುವ ಮತ್ತು ಶೋಷಣೆಗೆ ಒಳಗಾಗುವ ಅಪಾಯ ಅಧಿಕವಾಗಿರುತ್ತದೆ. ಪರಿಣಾಮಕಾರಿತ್ವದ ನಿಟ್ಟಿನಲ್ಲಿ, ಪ್ರಜಾಪ್ರಭುತ್ವ ರಾಷ್ಟ್ರದ ಪ್ರಜೆಯು ಅಸತ್ಯ ಹಾಗೂ ಪ್ರಚಾರದಲ್ಲಿನ ನಿಜಾಂಶಗಳನ್ನು ಶೋಧಿಸುವ ಬುದ್ಧಿವಂತಿಕೆ ಹಾಗೂ ಪ್ರಾಮಾಣಿಕತೆಯನ್ನು ಹೊಂದಿದ್ದು, ಮತೀಯ ವಿಚಾರದಲ್ಲಿನ ದುರಭಿಮಾನ ಹಾಗೂ ಪೂರ್ವಗ್ರಹಗಳಿಂದ ಕೂಡಿದ ಅಪಾಯಕಾರಿ ಓಲೈಕೆಯನ್ನು ತಿರಸ್ಕರಿಸುವ ಚಾಣಾಕ್ಷತನವು ಆತನಿಗಿರಬೇಕು. ಅದಕ್ಕಾಗಿ ಆತ ವಸ್ತುನಿಷ್ಠವಾಗಿ ಯೋಚಿಸುವ ಹಾಗೂ ಪರೀಕ್ಷಿತ ದತ್ತಾಂಶಗಳ ಆಧಾರದಲ್ಲಿ ತನ್ನ ತೀರ್ಮಾನಗಳನ್ನು ಕೈಗೊಳ್ಳುವ ವೈಜ್ಞಾನಿಕವಾದ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ಇದರ ಜೊತೆಗೆ ಆತ ಹೊಸ ಚಿಂತನೆಗಳ ಗ್ರಹಿಕೆಯ ಬಗೆಗೆ ಮುಕ್ತ ಮನಸ್ಸನ್ನು ಹೊಂದಿರಬೇಕು ಮತ್ತು ಗೊಡ್ಡು ಸಂಪ್ರದಾಯಗಳು, ಆಚಾರ ವಿಚಾರಗಳು ಮತ್ತು ನಂಬಿಕೆಗಳ ಗೋಡೆಗಳ ನಡುವೆ ಬಂದಿಯಾಗಬಾರದು. ಹಳೆಯದು ಎಂಬ ಕಾರಣಕ್ಕೆ ಅದನ್ನು ತಿರಸ್ಕರಿಸದೇ, ಹೊಸದು ಎಂಬ ಕಾರಣಕ್ಕೆ ಅದನ್ನು ಸ್ವೀಕರಿಸದೇ, ಎರಡನ್ನೂ ತುಲನಾತ್ಮಕವಾಗಿ ಪರೀಕ್ಷಿಸುವ ಮತ್ತು ನ್ಯಾಯ ಹಾಗೂ ಪ್ರಗತಿಯನ್ನು ವಿರೋಧಿಸುವ ಶಕ್ತಿಗಳನ್ನು ಧೈರ್ಯವಾಗಿ ತಿರಸ್ಕರಿಸುವ ಮನೋಧರ್ಮವನ್ನು ಬೆಳೆಸಿಕೊಳ್ಳಬೇಕು. ಶೈಕ್ಷಣಿಕ ವಿಧಾನಗಳ ನಿಭಾವಣೆ ಮತ್ತು ಶಿಕ್ಷಣದ ಮೂಲಕ ಇಂತಹ ಮನಸ್ಸನ್ನು ಬೆಳೆಸಿಕೊಳ್ಳುವುದು ಹೇಗೆ ಎಂಬ ಬಗ್ಗೆ ನಾವು ಮುಂದೆ ಚರ್ಚಿಸೋಣ. ನಾವು ಇಲ್ಲಿ ಹೆಚ್ಚು ಒತ್ತು ನೀಡಿ ಹೇಳಲು ಬಯಸುವ ಒಂದು ಸಂಗತಿ ಏನೆಂದರೆ, ಶಿಕ್ಷಕರು ತಮ್ಮ ಶೈಕ್ಷಣಿಕ ಚಿಂತನೆಗಳು ಮತ್ತು ಕಾರ್ಯತಂತ್ರವನ್ನು ಪ್ರಜ್ಞಾಪೂರ್ವಕವಾಗಿ ಉತ್ತೇಜಿಸತಕ್ಕ ಅತ್ಯಂತ ಮಹತ್ತ್ವದ ಗುರಿಗಳಲ್ಲಿ ಇದೂ ಒಂದು

ಎಂದು ಪರಿಗಣಿಸಬೇಕಾದ ಅಗತ್ಯವಿದೆ. ನಮ್ಮ ತರಗತಿಗಳಲ್ಲಿ ಸಾಮಾನ್ಯವಾಗಿ ಬೋಧಿಸಲಾಗುವ, ನಿಷ್ಕ್ರಿಯತೆಯನ್ನೇ ಮೈಗೂಡಿಸಿಕೊಂಡಿರುವ ಪಾಠಗಳಿಂದ ಇಂತಹ ಮನಸ್ಥಿತಿಯನ್ನು ಬೆಳೆಸಲು ಸಾಧ್ಯವಿಲ್ಲ ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು.

ನಮ್ಮ ಚಿಂತನೆಯಲ್ಲಿ ಸ್ಪಷ್ಟತೆಯಿದ್ದರೆ ನಮ್ಮ ಮಾತು ಮತ್ತು ಬರೆಹಗಳಲ್ಲಿಯೂ ಸ್ಪಷ್ಟತೆ ಇರುತ್ತದೆ. ಬಲವಂತಕ್ಕೆ ಬದಲಾಗಿ, ಮುಕ್ತ ಚರ್ಚೆ, ಮನವೊಲಿಕೆ ಮತ್ತು ಆಲೋಚನೆಗಳ ಶಾಂತಿಯುತ ವಿನಿಮಯವನ್ನು ಅವಲಂಬಿಸಿರುವ ಪ್ರಜಾಪ್ರಭುತ್ವದಲ್ಲಿ ಇದು ಮಹತ್ತ್ವದ ಸಾಮಾಜಿಕ ಆಸ್ತಿ ಮಾತ್ರವಲ್ಲದೆ ಯಶಸ್ವಿ ಬದುಕಿಗೆ ಅತ್ಯಂತ ಅಗತ್ಯವೂ ಹೌದು. ಒಬ್ಬ ವ್ಯಕ್ತಿಯ ಪ್ರಭಾವವು ಅನುಭವಕ್ಕೆ ಬರಬೇಕಾದರೆ ಮತ್ತು ಆರೋಗ್ಯಪರ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವಲ್ಲಿ ಕೈಜೋಡಿಸಬೇಕಾದರೆ ಶಿಕ್ಷಿತ ವ್ಯಕ್ತಿಯು ತನ್ನ ಮಾತು ಮತ್ತು ಬರೆಹದಲ್ಲಿ ಸ್ಪಷ್ಟತೆಯನ್ನು ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಹೊಂದಿರಬೇಕಾಗುತ್ತದೆ.

ಘನತೆಯಲ್ಲಿ ನಂಬಿಕೆ ಮತ್ತು ಪ್ರತಿಯೊಬ್ಬ ವ್ಯಕ್ತಿಯನ್ನೂ ಮನುಷ್ಯನೆಂದು ಕಾಣಬೇಕು ಎಂಬ ಸಿದ್ಧಾಂತವನ್ನು ಪ್ರಜಾಪ್ರಭುತ್ವವು ಆಧರಿಸಿದೆ. ತೀರ ಸಹಜವಾಗಿರುವ "ಯೋಗ್ಯತೆಯನ್ನು" ಆರ್ಥಿಕ ಸ್ಥಿತಿ ಅಥವಾ ಜನಾಂಗೀಯ ಅಥವಾ ಸಾಮಾಜಿಕ ಪರಿಗಣನೆಯಿಂದ ಮರೆಮಾಚಲಾಗುವುದಿಲ್ಲ. ಹಾಗಾಗಿ ಪ್ರಜಾಸತ್ತಾತ್ಮಕ ಶಿಕ್ಷಣದ ಉದ್ದೇಶವೇನೆಂದರೆ ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವದ ಪರಿಪೂರ್ಣ ಮತ್ತು ಸರ್ವಾಂಗೀಣ ಅಭಿವೃದ್ಧಿ. ಇದಕ್ಕಾಗಿ ಶಿಕ್ಷಣವು ಆತನ ಎಲ್ಲ ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಅಂದರೆ, ಮಾನಸಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಪ್ರಾಯೋಗಿಕ ಅಂಶಗಳನ್ನು ಅದು ಪೂರೈಸುವಂತಿರಬೇಕು. ಇಂತಹ ಮೂಲಭೂತ ಪರಿಕಲ್ಪನೆಯಿಂದ ಒಡಮೂಡಿದ ಶಿಕ್ಷಣದ ದೃಷ್ಟಿಕೋನವು ಸಂಕುಚಿತ ಶೈಕ್ಷಣಿಕ ವಿಧಾನವನ್ನು ಮೀರಿ, ಬದುಕಿಗಾಗಿ ಶಿಕ್ಷಣ ಎಂಬ ದೃಷ್ಟಿಕೋನದ ನಿಟ್ಟಿನಲ್ಲಿ ವಿಸ್ತೃತಗೊಳ್ಳುತ್ತದೆ; ಅಂದರೆ, ಒಂದು ಸಮುದಾಯದಲ್ಲಿ ಬದುಕುವ ಬಹುಮುಖ ಕಲೆಯಲ್ಲಿ ತೊಡಗಿಕೊಳ್ಳಲು ವಿದ್ಯಾರ್ಥಿಗಳಿಗೆ ಶಿಕ್ಷಣವು ನೆರವಾಗುತ್ತದೆ. ಆದರೆ, ವ್ಯಕ್ತಿಯು ಏಕಾಂಗಿಯಾಗಿ ಬೆಳವಣಿಗೆ ಹೊಂದಲು ಸಾಧ್ಯವಿಲ್ಲ ಎಂಬುದು ಸ್ಪಷ್ಟ. ತನ್ನ ಪರಿಪೂರ್ಣ ಬೆಳವಣಿಗೆಗೆ ಮತ್ತು ಸಮಾಜದ ಒಳಿತಿಗಾಗಿ ಆತ/ಆಕೆ ಇತರರೊಂದಿಗೆ ಸೇರಿ ಬದುಕುವುದನ್ನು ಮತ್ತು ಇತರ ವ್ಯಕ್ತಿಗಳೊಂದಿಗಿನ ಪ್ರಾಯೋಗಿಕ ಅನುಭವ ಮತ್ತು ಮುಕ್ತವಾಗಿ ಅನ್ಯೋನ್ಯತೆಯಿಂದ ಇರುವುದರ ಮೂಲಕ ಪರಸ್ಪರ ಸಹಕಾರದ ಮೌಲ್ಯವನ್ನು ಗ್ರಹಿಸುವುದು ಮುಖ್ಯವಾಗುತ್ತದೆ. ಅತ್ಯಂತ ಸ್ನೇಹಪೂರ್ವಕವಾಗಿ, ಸೌಹಾರ್ದತೆ ಮತ್ತು ದಕ್ಷತೆಯಿಂದ ತನ್ನ ಸಹಚರರೊಂದಿಗೆ ಬದುಕಲು ಅಗತ್ಯವಾದ ಗುಣಗಳನ್ನು ಬೋಧಿಸದ ಯಾವುದೇ ಶಿಕ್ಷಣವೂ ಮಹತ್ತ್ವದ್ದೆನಿಸಿಕೊಳ್ಳುವುದಿಲ್ಲ. ಈ ಉದ್ದೇಶಕ್ಕಾಗಿ ನಾವು ಬೆಳೆಸಿಕೊಳ್ಳಬೇಕಾದ ಗುಣಗಳಲ್ಲಿ ಶಿಸ್ತು, ಪರಸ್ಪರ ಸಹಕಾರ, ಸಾಮಾಜಿಕ ಸಂವೇದನಾಶೀಲತೆ ಮತ್ತು ಸಹನೆ ಸೇರಿವೆ. ಮನುಷ್ಯನನ್ನು ದಯಾಳುವನ್ನಾಗಿ, ಸಮಾಜದಲ್ಲಿ ಬೆರೆಯುವಂತೆ ಮಾಡಲು ಈ ಪ್ರತಿಯೊಂದು ಗುಣವೂ ತನ್ನದೇ ಆದ ವಿಶೇಷ ಪಾತ್ರವನ್ನು ನಿರ್ವಹಿಸುತ್ತದೆ. ಒಂದು ಸಮೂಹದಲ್ಲಿ ಯಶಸ್ವಿಯಾಗಿ ಕೆಲಸಮಾಡುವಲ್ಲಿ ಶಿಸ್ತು ಅತ್ಯಂತ ಅಗತ್ಯವಾದ ಗುಣವಾಗಿರುತ್ತದೆ. ಶಿಸ್ತೇ ಇಲ್ಲದ ವ್ಯಕ್ತಿ ಯಾವುದೇ ಕಾರ್ಪೊರೇಟ್ ಯೋಜನೆಯನ್ನು ಪೂರ್ಣಗೊಳಿಸುವಲ್ಲಿ ಪರಿಣಾಮಕಾರಿಯಾದ ಕೊಡುಗೆಯನ್ನು ನೀಡಲು ಸಾಧ್ಯವಿಲ್ಲ ಮಾತ್ರವಲ್ಲ, ತಾನೂ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವುದಿಲ್ಲ. ಈ ಹಿಂದೆ ಬೇರೆಡೆ ಚರ್ಚೆಮಾಡಿರುವಂತೆ ಅನೇಕ ಕಾರಣಗಳಿಂದಾಗಿ ಇತ್ತೀಚಿನ ದಶಕಗಳಲ್ಲಿ ಶಿಸ್ತಿನ ಗುಣಮಟ್ಟವು ಶಿಥಿಲವಾಗಿರುವುದು ತೀರ ಶೋಚನೀಯ ಸ್ಥಿತಿ. ಇವುಗಳಲ್ಲಿ ಸುಧಾರಣೆಯನ್ನು ತರಲು ವಿಶೇಷ ಪ್ರಯತ್ನಗಳು ಅಗತ್ಯವಾಗಿವೆ. ಇದನ್ನು ನಾವು ಬುದ್ಧಿವಂತಿಕೆ ಹಾಗೂ ಮಾನಸಿಕ ಪ್ರಬುದ್ಧತೆಯ ವಿಧಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ನಿರ್ವಹಿಸಿದರೆ, ರಾಷ್ಟ್ರೀಯ ಚಾರಿತ್ರ್ಯದ ಅಭಿವೃದ್ಧಿಗೆ ಮೌಲ್ಯಯುತವಾದ ಕೊಡುಗೆ ನೀಡಿದಂತಾಗುತ್ತದೆ ಮತ್ತು ನಮ್ಮ ಪ್ರಜಾಸತ್ತಾತ್ಮಕ ಪ್ರಯೋಗದ ಯಶಸ್ಸನ್ನು ಖಚಿತಗೊಳಿಸಿದಂತಾಗುತ್ತದೆ.

ಒಂದು ನಿರ್ವಾತ ಸ್ಥಿತಿಯಲ್ಲಿ ಈ ಶಿಸ್ತನ್ನು ಬೆಳೆಸಿಕೊಳ್ಳಲು ಸಾಧ್ಯವಿಲ್ಲ; ಇದು ಪರಸ್ಪರ ಸಹಕಾರದಿಂದ, ಮನಃಪೂರ್ವಕವಾಗಿ ಕೈಗೊಂಡ ಮತ್ತು ಪರಿಣಾಮಕಾರಿಯಾಗಿ ಪೂರ್ಣಗೊಳಿಸಿದ ಕೆಲಸದಿಂದ ದಕ್ಕುವ ಫಲ, ಮೌಲಿಕ ಉಪ ಉತ್ಪನ್ನ. ಪರಸ್ಪರ ಸಹಕಾರದ ಅಪೇಕ್ಷೆಯನ್ನು ಸಶಕ್ತಗೊಳಿಸುವ ಮತ್ತು ವಿದ್ಯಾರ್ಥಿಗಳು ಇದನ್ನು ಆಚರಣೆಯಾಗಿ ಪರಿವರ್ತಿಸುವ ಅವಕಾಶಗಳನ್ನು ಬಳಸಿಕೊಳ್ಳುವಂತೆ ಮಾಡುವ ಗುರಿ ಶಾಲೆಗಳದ್ದಾಗಿದೆ. ಆದರೆ, ಸಾಮಾಜಿಕ ಉದ್ದೇಶ ಎನ್ನುವುದು ಪ್ರಯತ್ನದ ಅತ್ಯುತ್ತಮ ಹಾದಿ

ಎಂಬ ನಂಬಿಕೆಯ ಆಧಾರದಲ್ಲಿ ಈ ಸಹಕಾರವನ್ನು ಪ್ರೇರಿತಗೊಳಿಸತಕ್ಕದ್ದು. ಏಕೆಂದರೆ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿನ ಬದುಕು ಯಾರೋ ಒಬ್ಬರ ಕೈಯಲ್ಲಿ ಇರುವುದಲ್ಲ, ಬದಲಾಗಿ, ಅದು ಎಲ್ಲರಿಗೂ ಸಮಾನವಾದ ಅವಕಾಶ ಮತ್ತು ಅವಕಾಶ ವಂಚಿತರಿಗೆ ನ್ಯಾಯವನ್ನು ಒದಗಿಸಲು ನಿರಂತರ ಕಠಿಣ ಹೋರಾಟಕ್ಕೆ ಕರೆ ನೀಡುವಂತಹುದು. ಬದುಕನ್ನು ಅಸಹನೀಯಗೊಳಿಸುವ ಸಾಮಾಜಿಕ ಪಿಡುಗುಗಳು ಮತ್ತು ಶೋಷಣೆಗೆ ಸಂಬಂಧಿಸಿದಂತೆ ಸೂಕ್ಷ್ಮ ಸಂವೇದನೆಯನ್ನು ಆಧರಿಸಿದ ಸಾಮಾಜಿಕ ನ್ಯಾಯದ ಬಗೆಗಿನ ತೀವ್ರಾಸಕ್ತಿಯನ್ನು ನಮ್ಮ ಜನರ ಹೃದಯ ಮತ್ತು ಮನಸ್ಸಿನಲ್ಲಿ ಉದ್ದೀಪನಗೊಳಿಸಬೇಕು ಮತ್ತು ಇದರ ಅಡಿಪಾಯಗಳನ್ನು ಶಾಲೆಗಳಲ್ಲಿಯೇ ಹಾಕಬೇಕು. ಆ ಮೂಲಕ ಮಗು ಮತ್ತು ಹರೆಯದವರಿಗೆ ತಾವು ಬದುಕುತ್ತಿರುವ ಜಗತ್ತಿನ ಸುಸ್ಪಷ್ಟವಾದ ಚಿತ್ರಣ ದೊರೆಯತಕ್ಕದ್ದು. ಅಲ್ಲದೆ, ಅಂತಹ ಜಗತ್ತಿನ ಸಂಪ್ರದಾಯಗಳು, ಪದ್ಧತಿಗಳು ಮತ್ತು ಸಂಸ್ಥೆಗಳನ್ನು ಕುರಿತು ನಿರ್ಣಯಿಸುವ ಮಾನಕಗಳ ಪರಿಚಯವನ್ನೂ ಅದು ಒದಗಿಸತಕ್ಕದ್ದು. ಈ ಸಾಮಾಜಿಕ ಸಂವೇದನಾಶೀಲತೆಯು ಉತ್ತಮ ಚಾರಿತ್ರ್ಯದ ನೈತಿಕ ತಳಹದಿಯಾಗಿದೆ. ಅದು ಇಲ್ಲದೇ ಹೋದರೆ ದಕ್ಷತೆ, ಶಿಸ್ತು, ಸಹಕಾರ ಮತ್ತು ಇನ್ನೂ ಇತರ ಉತ್ತಮ ಗುಣಗಳು ನಿಷ್ಫಲ ಅಥವಾ ಹೀನ ಉದ್ದೇಶಗಳಿಗಾಗಿ ಭ್ರಷ್ಟಗೊಂಡಿರುತ್ತವೆ. ಅಂತಿಮವಾಗಿ, ನಾವು ಯಾವತ್ತೂ ಸಹನೆಗೆ ಹೆಚ್ಚಿನ ಮಹತ್ತ್ವವನ್ನು ನೀಡಬೇಕು, ಸಹನೆ ಇಲ್ಲದೆ ಹೋದರೆ ನಮ್ಮ ಆರೋಗ್ಯ ಮಾತ್ರವಲ್ಲ ಪ್ರಜಾಪ್ರಭುತ್ವದ ಅಸ್ತಿತ್ವವನ್ನೂ ಕಾಪಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಒಂದು ಪ್ರಜಾಸತ್ತಾತ್ಮಕ ಸಮಾಜದ ಸಾರ ಇರುವುದು ಕೇವಲ ಸಹನೆಯಲ್ಲಿ ಮಾತ್ರವಲ್ಲ, ಬದಲಾಗಿ ಭಿನ್ನ ಅಭಿಪ್ರಾಯಗಳನ್ನೂ ನಾವು ಸ್ವಾಗತಿಸಬೇಕಾಗುತ್ತದೆ, ಇದು ನಮ್ಮ ಜೀವನವನ್ನು ಸಮೃದ್ಧಗೊಳಿಸುತ್ತದೆ. ವಿಭಿನ್ನ ನಂಬಿಕೆಗಳು, ವಿಚಾರಗಳು, ಅಭಿಪ್ರಾಯಗಳು, ಅಭಿರುಚಿಗಳು ಮತ್ತು ಆಸಕ್ತಿಗಳನ್ನು ಏಕರೂಪಕ್ಕೆ ಎಳೆದು ತರುವುದರಿಂದ ಸಂಕುಚಿತ ಹಾಗೂ ಕೀಳರಿಮೆಯ ಪ್ರಜ್ಞೆಯನ್ನು ತೊಡೆದುಹಾಕಿ ದಕ್ಷತೆಯನ್ನು ತರಲು ಸಾಧ್ಯವಾಗುತ್ತದೆ, ಆದರೆ ಇದು ನಿಶ್ಚಿತವಾಗಿ ಜೀವನವನ್ನು ದುರ್ಬಲಗೊಳಿಸುವುದು ಮಾತ್ರವಲ್ಲದೆ ಮಾನವ ಸ್ಫೂರ್ತಿಯ ಮುಕ್ತ ಅಭಿವ್ಯಕ್ತಿಯನ್ನು ಮೊಟಕುಗೊಳಿಸುತ್ತದೆ. ಅನೇಕ ಶ್ರದ್ಧೆಗಳು, ಜನಾಂಗಗಳು ಮತ್ತು ಸಮುದಾಯಗಳಿಗೆ ಆಶ್ರಯನೀಡಿರುವ ನಮ್ಮ ದೇಶದಂತಹ ಪ್ರಜಾಪ್ರಭುತ್ವ ಉಳಿಯಬೇಕಾದರೆ, ಶಿಕ್ಷಣವು ನಮ್ಮ ಯುವಕರಲ್ಲಿ ಮುಕ್ತ ಮನಸ್ಸು ಮತ್ತು ಹೃದಯ ವೈಶಾಲ್ಯವನ್ನು ಬೆಳೆಸಿಕೊಳ್ಳುವಂತೆ ಪ್ರೇರೇಪಿಸಬೇಕು. ಇದರಿಂದಾಗಿ ಅವರು ಚಿಂತನೆಗಳು ಮತ್ತು ನಡವಳಿಕೆಗಳಲ್ಲಿ ಇರುವ ಭಿನ್ನಾಭಿಪ್ರಾಯಗಳನ್ನು ಸೌಹಾರ್ದಯುತವಾದ ರೀತಿಯಲ್ಲಿ ಹೊಂದಾಣಿಕೆ ಮಾಡುವ ಸಾಮರ್ಥ್ಯವನ್ನು ಪಡೆಯುತ್ತಾರೆ. ಶಾಲೆಯ ನಾನಾ ವಿಷಯಗಳನ್ನು, ಅದರಲ್ಲೂ ಮುಖ್ಯವಾಗಿ ಮಾನವಿಕಗಳು ಹಾಗೂ ಸಮಾಜ ಅಧ್ಯಯನಗಳಂತಹ ವಿಷಯಗಳನ್ನು ಸಮರ್ಪಕವಾಗಿ ಪ್ರಸ್ತುತಪಡಿಸುವುದರ ಮೂಲಕ ಮಾತ್ರವಲ್ಲದೆ ತನ್ನ ವಿದ್ಯಾರ್ಥಿಗಳು ಬೇರೆ ಬೇರೆ ಜಾತಿ, ಜನಾಂಗ ಮತ್ತು ವರ್ಗಗಳಿಂದ ಬಂದವರೆಂಬ ಸಂಗತಿಯ ನಿಟ್ಟಿನಲ್ಲಿ ಲಭ್ಯವಿರುವ ಸಂಪನ್ಮೂಲಗಳು ಮತ್ತು ಅವಕಾಶಗಳನ್ನು ಬಳಸಿಕೊಳ್ಳುವ ಮೂಲಕ ಪ್ರತಿ ಶಾಲೆಗೂ ಇದನ್ನು ಸಾಧಿಸುವುದು ಸಾಧ್ಯವಿದೆ. ಅವರು ಶಾಲೆಯ ಚಿಕ್ಕ ಸಮುದಾಯದಲ್ಲಿ ನೆಮ್ಮದಿ ಹಾಗೂ ಶಾಂತಿಯುತವಾಗಿ ಬದುಕಲು ಮೊದಲು ಕಲಿತುಕೊಂಡರೆ, ಇದೇ ತರಬೇತಿಯು ಅನಂತರ ಅವರನ್ನು ಹೊರಗೆ ವಿಶಾಲವಾದ ಸಮುದಾಯದ ವ್ಯಾಪ್ತಿಯಲ್ಲಿ ಬದುಕುವಂತೆ ಮಾಡುತ್ತದೆ. ಮಾಧ್ಯಮಿಕ ಶಾಲೆಗಳು ಪೋಷಿಸಬೇಕಾದ ಇನ್ನೊಂದು ಬಹುಮುಖ್ಯ ಗುರಿ ಏನೆಂದರೆ ಅವರಲ್ಲಿ 'ನಿಜವಾದ ದೇಶಭಕ್ತಿಯನ್ನು ಬೆಳೆಸುವುದು. ಈ ಗುರಿಯ ಸೂಕ್ತ ವ್ಯಾಖ್ಯಾನದಲ್ಲಿ, 'ನಿಜವಾದ' ಎಂಬ ಇದರ ವಿಶೇಷಣವು, ನಾಮಪದದಷ್ಟೇ ಮುಖ್ಯವಾಗುತ್ತದೆ! ಶಿಕ್ಷಣದ ಮೂಲಕ ಇದನ್ನು ಸೇರ್ಪಡೆಗೊಳಿಸುವ ಔಚಿತ್ಯದಲ್ಲಿ, ತಮ್ಮದೇ ರಾಷ್ಟ್ರದ ಬಗ್ಗೆ ಅಪಾರವಾದ ಪ್ರೀತಿ ಮೂಡುವುದರಲ್ಲಿ ಯಾವುದೇ ಅನುಮಾನವಿರುವುದಿಲ್ಲ, ಆದರೆ ಹೀಗೆ ಮಾಡುವಲ್ಲಿ, ಈ ಪ್ರೀತಿ ಅತಿರೇಕದ ರಾಷ್ಟ್ರಪ್ರೇಮವಾಗಿ ಭ್ರಷ್ಟಗೊಳ್ಳದಂತೆ ನೋಡಿಕೊಳ್ಳುವುದೂ ಅತ್ಯಗತ್ಯ. ನಿಜವಾದ ದೇಶಭಕ್ತಿ ಮೂರು ಅಂಶಗಳನ್ನು ಒಳಗೊಂಡಿರುತ್ತದೆ; ಒಬ್ಬರ ರಾಷ್ಟ್ರದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಾಧನೆಗಳ ಪ್ರಾಮಾಣಿಕ ಗುಣಗ್ರಹಣ, ಅದರ ದೌರ್ಬಲ್ಯಗಳನ್ನೂ ಕೂಡ ಮುಕ್ತ ಮನಸ್ಸಿನಿಂದ ಗುರುತಿಸಲು ಸಿದ್ಧರಾಗಿರುವುದು ಮತ್ತು ಅವುಗಳ ನಿರ್ಮೂಲನೆಗೂ ಕಾರ್ಯೋನ್ಮುಖರಾಗುವುದು ಹಾಗೂ ಒಬ್ಬನ ಸಾಮರ್ಥ್ಯಕ್ಕೆ ತಕ್ಕ ಸೇವೆ ಸಲ್ಲಿಸಲು ತೀವ್ರಾಸಕ್ತಿಯ ಸಂಕಲ್ಪ ಮತ್ತು ವೈಯಕ್ತಿಕ ಆಸಕ್ತಿಗಳನ್ನು ವಿಶಾಲ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅಧೀನಸ್ಥ ಹಾಗೂ ಅನುರೂಪಗೊಳಿಸುವುದು. ಇಂತಹ ಸಮದ್ಧ ಹಾಗೂ ದೇಶಭಕ್ತಿಯ ಮೂರು ಪರಿಕಲ್ಪನೆಗಳನ್ನು ಬೆಳೆಸಲು ಶಾಲೆಗಳು ಮುಂದಾಗಬೇಕು. ಪಠ್ಯಕ್ರಮದ ಸಮರ್ಪಕ ಅನುಸ್ಥಾಪನ ಹಾಗೂ

ಪ್ರಸ್ತುತಿಯ ಮೂಲಕ, ರಾಷ್ಟ್ರವು ಸಾಹಿತ್ಯ ಮತ್ತು ವಿಜ್ಞಾನ, ಕಲೆ ಮತ್ತು ವಾಸ್ತುಶಿಲ್ಪ, ಧರ್ಮ ಮತ್ತು ತತ್ವಜ್ಞಾನ, ಕುಶಲಕಲೆ ಮತ್ತು ಕೈಗಾರಿಕೆಗಳು ಹಾಗೂ ಮಾನವ ಪ್ರಯತ್ನದ ಇತರ ಕ್ಷೇತ್ರಗಳಲ್ಲಿ ಮಾಡಿದ ಸಾಧನೆಗಳನ್ನು ವಿದ್ಯಾರ್ಥಿಗಳು ಗ್ರಹಿಸಿ, ತಮ್ಮ ರಾಷ್ಟ್ರದ ಬಗ್ಗೆ ಹೆಮ್ಮೆಪಡುವಂತೆ ಮಾಡಬಹುದಾಗಿದೆ. ಸೂಕ್ತ ರೀತಿಯಲ್ಲಿ ಕಾರ್ಯಕ್ರಮಗಳು ಹಾಗೂ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಈ ಭಾವನೆಗಳನ್ನು ಇನ್ನಷ್ಟು ತ್ವರೆಗೊಳಿಸಿ ದೃಢಗೊಳಿಸಬಹುದು. ಇದರ ಜೊತೆಗೆ ರಾಷ್ಟ್ರೀಯ ಬದುಕಿನ ಒಟ್ಟಾರೆ ಚಿತ್ರಣದ ನಿಷ್ಠುರ ಮೌಲ್ಯನಿರ್ಣಯವು ಅವಶ್ಯ. ಇದು ಹೇಗಿರಬೇಕೆಂದರೆ, ಈ ಹಂತದಲ್ಲಿ ವಿದ್ಯಾರ್ಥಿಗಳ ಮಾನಸಿಕ ಸಾಮರ್ಥ್ಯಕ್ಕೆ ನಿಲುಕುವಂತಿರಬೇಕು. ಇದನ್ನು ಶಾಲೆಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ನೆಲೆಗೊಳಿಸಿ, ಉತ್ತೇಜನ ನೀಡಬೇಕು. ಸ್ಪಷ್ಟ ಹಾಗೂ ವಸ್ತುನಿಷ್ಠ ಆಲೋಚನೆಯ ಸಾಮರ್ಥ್ಯವು ಗಮನಾರ್ಹವಾದ ಶೈಕ್ಷಣಿಕ ಗುರಿ ಎಂದು ನಾವು ಪರಿಗಣಿಸಿದ್ದೇವೆ. ಅದನ್ನು ಈ ಸಂಬಂಧವಾಗಿ, ಅದರಲ್ಲೂ ಮುಖ್ಯವಾಗಿ ಸಾಮಾಜಿಕ ಅಧ್ಯಯನಗಳನ್ನು ಬೋಧನೆಮಾಡುವ ಸಂದರ್ಭದಲ್ಲಿ ಕಾರ್ಯಾನ್ವಿತಗೊಳಿಸಬೇಕಿದೆ. ಒಬ್ಬರ ಪರಂಪರೆಯಲ್ಲಿ ಯಾವುದು ಉತ್ತಮವಾದುದು ಎಂಬುದರ ಗ್ರಹಿಕೆಯು, ದೇಶಭಕ್ತಿಯ ಒಂದು ಅಂಶವೆಂಬ ಮಹಾನ್ ಸತ್ಯವನ್ನು ವಿದ್ಯಾರ್ಥಿಗಳು ಕಲಿಯತಕ್ಕದ್ದು. ಅದೇ ವೇಳೆ ಮೌಲ್ಯಯುತವಲ್ಲದ್ದನ್ನು ತಿರಸ್ಕರಿಸುವುದು ಮತ್ತು ಅದನ್ನು ಸುಧಾರಿಸಬೇಕು ಎಂಬ ಆಸಕ್ತಿ ಕೂಡ ಅಷ್ಟೇ ಮಹತ್ತ್ವದ್ದಾಗುತ್ತದೆ. ಇಂದಿನ ಜಗತ್ತಿನಲ್ಲಿ 'ನನ್ನ ದೇಶ, ಸರಿಯೋ ಅಥವಾ ತಪ್ಪೋ' ಎಂಬುದಕ್ಕಿಂತ ದೊಡ್ಡ ಅಪಾಯಕಾರಿ ಸೂತ್ರ ಇನ್ನೊಂದಿಲ್ಲ. ಇಡೀ ಜಗತ್ತು ಈಗ ಎಷ್ಟೊಂದು ಪರಸ್ಪರ ನಿಕಟವಾದ ಸಂಬಂಧವನ್ನು ಹೊಂದಿದೆ ಎಂದರೆ ಯಾವ ರಾಷ್ಟ್ರವೂ ಏಕಾಂಗಿಯಾಗಿ ಇರುತ್ತೇನೆ ಎಂಬ ಧೈರ್ಯವನ್ನು ತೋರಿಸುವಂತಿಲ್ಲ, ಒಂದು ರಾಷ್ಟ್ರದ ಪ್ರಜೆ ಎಂಬ ಪ್ರಜ್ಞೆ ಎಷ್ಟು ಮುಖ್ಯವೋ ಜಗತ್ತಿನ ಪ್ರಜೆ ಎಂಬ ಪ್ರಜ್ಞೆಯೂ ಅಷ್ಟೇ ಪ್ರಮುಖವೆನಿಸಿದೆ. ಹಾಗಾಗಿ, ತೀರ ನಿಜವಾದ ಅರ್ಥದಲ್ಲಿ, 'ದೇಶಭಕ್ತಿಯೊಂದು ಮಾತ್ರ ಸಾಲದು' ಮತ್ತು ಅದಕ್ಕೆ ಪೂರಕವಾಗಿ ನಾವೆಲ್ಲರೂ ಒಂದೇ ಜಗತ್ತಿನ ಸದಸ್ಯರು ಎಂಬ ಸತ್ಯವನ್ನು ನಾವು ಅರಿಯತಕ್ಕದ್ದು. ಹಾಗಾಗಿ ಅಂತಹ ಸದಸ್ಯತ್ವವು ವಿಧಿಸುವ ಜವಾಬ್ದಾರಿಗಳನ್ನು ನಿರ್ವಹಿಸಲು ನಾವು ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಸಿದ್ಧರಾಗಿರಬೇಕಾಗುತ್ತದೆ. ಈ ಉದ್ದೇಶವನ್ನು ಸಾಧಿಸಲು ಬೇಕಾದ ಅನೇಕ ವಿಧಾನಗಳ ಬಗೆಗೆ ನಾವಿಲ್ಲಿ ಚರ್ಚಿಸಬೇಕಾದ ಅಗತ್ಯವಿರುವುದಿಲ್ಲ. ಅಂತಾರಾಷ್ಟ್ರೀಯ ಅರಿವನ್ನು ಮೂಡಿಸುವ ದೃಷ್ಟಿಯಿಂದ ವಿಶ್ವದಾದ್ಯಂತ ಹಲವಾರು ಶಾಲೆಗಳಲ್ಲಿ ಅನೇಕ ಆಸಕ್ತಿದಾಯಕ ಹಾಗೂ ಮಹತ್ತ್ವದ ಪ್ರಯೋಗಗಳನ್ನು ಮಾಡಲಾಗಿದೆ ಮತ್ತು ಈಗಲೂ ಮಾಡಲಾಗುತ್ತಿದೆ ಹಾಗೂ ಇವೆಲ್ಲವನ್ನೂ ಅಧ್ಯಯನ ಮಾಡುವುದರಿಂದ ಪ್ರಯೋಜನವುಂಟು.

ವೃತ್ತಿಪರ ದಕ್ಷತೆಯ ಸುಧಾರಣೆ

ನಮ್ಮ ರಾಷ್ಟ್ರೀಯ ಪರಿಸ್ಥಿತಿಯಲ್ಲಿನ ಎರಡನೇ ಪ್ರಮುಖ ಅಂಶಕ್ಕೆ ಸಂಬಂಧಿಸಿದಂತೆ, ನಾವು ನಮ್ಮ ವಿದ್ಯಾರ್ಥಿಗಳ ಉತ್ಪಾದಕತೆ ಅಥವಾ ತಾಂತ್ರಿಕ ಮತ್ತು ವೃತ್ತಿಪರ ದಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗಮನವನ್ನು ಕೇಂದ್ರೀಕರಿಸುವ ಅಗತ್ಯವಿದೆ. ಇದು ಕೇವಲ ಕೆಲಸದ ಬಗೆಗೆ ಹೊಸ ನಿಲುವನ್ನು ಸೃಷ್ಟಿಸುವುದು ಮಾತ್ರವಲ್ಲ. ಎಷ್ಟೇ "ಕೀಳಾದ" ಕೆಲಸವೇ ಆಗಿರಲಿ, ಎಲ್ಲ ಕೆಲಸದ ಘನತೆಯನ್ನೂ ಗ್ರಹಿಸುವ ಮನೋಭಾವವು ಅಗತ್ಯ. ಪ್ರತಿಯೊಬ್ಬರೂ ಭಾಗಿಯಾಗತಕ್ಕ ಕೆಲಸದಿಂದ ಮಾತ್ರ ಆತ್ಮತೃಪ್ತಿ ಹಾಗೂ ರಾಷ್ಟ್ರೀಯ ಪ್ರಗತಿ ಸಾಧ್ಯ ಎಂಬ ಅರಿವು ಮತ್ತು ಶಿಕ್ಷಿತರು ಯಾವುದೇ ಕೆಲಸವನ್ನು ಕೈಗೆತ್ತಿಕೊಂಡಲ್ಲಿ ಅದನ್ನು ಅವರ ಅಧಿಕಾರದ ವ್ಯಾಪ್ತಿಯಲ್ಲಿಯೇ ಅತ್ಯಂತ ದಕ್ಷತೆ ಮತ್ತು ಕಲಾತ್ಮಕತೆಯಿಂದ ಪೂರ್ಣಗೊಳಿಸುವ ದೃಢ ನಿಶ್ಚಯವನ್ನು ಅವರಲ್ಲಿ ನೆಲೆಗೊಳಿಸಬೇಕು. ಇಂತಹ ನಿಲುವನ್ನು ರೂಪಿಸುವುದು ಪ್ರತಿಯೊಬ್ಬ ಶಿಕ್ಷಕರ ಕೆಲಸ ಮತ್ತು ಇದು ಶಾಲೆಯ ಪ್ರತಿಯೊಂದು ಚಟುವಟಿಕೆಯಲ್ಲೂ ಅಭಿವ್ಯಕ್ತಗೊಳ್ಳಬೇಕು. ವಿದ್ಯಾರ್ಥಿಗಳು ತಾವು ಮಾಡುವ ಎಲ್ಲ ಕೆಲಸವನ್ನು ಸಾಧ್ಯವಾದಷ್ಟು ಪರಿಪೂರ್ಣವಾಗಿ ಸಾಧಿಸಬೇಕೆಂಬ ಹಂಬಲ ಮತ್ತು ಪ್ರತಿಯೊಂದನ್ನೂ ಸಾಧ್ಯವಾದಷ್ಟು ಸಮಗ್ರವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಹೆಮ್ಮೆಪಡುವುದನ್ನು ಕಲಿಯಬೇಕು. ಅದೇ ರೀತಿ ಅರೆಮನಸ್ಸು ಅಥವಾ ಅಜಾಗರೂಕತೆ ಅಥವಾ ಅನುದ್ದೇಶಿತವಾಗಿ ಮಾಡುವ ಎಲ್ಲ ಕೆಲಸವನ್ನು ದೃಢ

ನಿಶ್ಚಯದಿಂದ, ಆದರೆ ಅಷ್ಟೇ ಸಹಾನುಭೂತಿಯಿಂದ ತಿರಸ್ಕರಿಸುವ ಪ್ರವೃತ್ತಿಯನ್ನು ಶಿಕ್ಷಕರು ಬೆಳೆಸಿಕೊಳ್ಳಬೇಕು. ಶೈಕ್ಷಣಿಕ ವಿಧಾನಗಳ ಬಗೆಗೆ ಚರ್ಚಿಸುವ ಸಂದರ್ಭದಲ್ಲಿ ಈ ವಿಷಯಕ್ಕೆ ಮರಳೋಣ. ಈ ನಿಲುವನ್ನು ಬೆಳೆಸಿಕೊಳ್ಳುವುದರ ಜೊತೆಗೇ, ನಮ್ಮ ಶಿಕ್ಷಣದ ಎಲ್ಲ ಹಂತಗಳಲ್ಲಿ ತಾಂತ್ರಿಕ ನೈಪುಣ್ಯ ಮತ್ತು ದಕ್ಷತೆಗೆ ಉತ್ತೇಜನ ನೀಡುವ ಅಗತ್ಯವಿದೆ. ಇದರಿಂದ ಕೈಗಾರಿಕೆ ಮತ್ತು ತಂತ್ರಜ್ಞಾನದ ಪ್ರಗತಿಯ ಯೋಜನೆಗಳಲ್ಲಿ ತೊಡಗಿಕೊಳ್ಳಲು, ತರಬೇತಿ ಹೊಂದಿದ ಹಾಗೂ ದಕ್ಷ ಸಿಬ್ಬಂದಿಯನ್ನು ನೀಡಲು ಸಾಧ್ಯವಾಗುತ್ತದೆ. ಹಿಂದೆಲ್ಲ, ನಮ್ಮ ಶಿಕ್ಷಣವು ತೀರ ಶೈಕ್ಷಣಿಕ ಹಾಗೂ ಸೈದ್ಧಾಂತಿಕವಾಗಿತ್ತು. ಈ ಕಾರಣದಿಂದಾಗಿ ಅದು ಪ್ರಾಯೋಗಿಕ ಕಾರ್ಯಗಳಿಂದ ದೂರ ಉಳಿದಿತ್ತು. ಸಾರ್ವಲೌಕಿಕವಾಗಿ ಹೇಳಬೇಕೆಂದರೆ, ಶಿಕ್ಷಿತ ವರ್ಗಗಳು ರಾಷ್ಟ್ರದ ನೈಸರ್ಗಿಕ ಸಂಪನ್ಮೂಲಗಳ ಬೆಳವಣಿಗೆಗೆ ಹಾಗೂ ಆ ಮೂಲಕ ರಾಷ್ಟ್ರೀಯ ಸಂಪತ್ತಿಗೆ ಅತ್ಯಮೂಲ್ಯವಾದ ಕೊಡುಗೆಯನ್ನು ನೀಡುವಲ್ಲಿ ವಿಫಲವಾಗಿದ್ದವು. ಇನ್ನು ಮುಂದೆ ಈ ಪ್ರವೃತ್ತಿ ಬದಲಾಗಬೇಕು. ಈ ಉದ್ದೇಶಕ್ಕಾಗಿ, ಎಲ್ಲ ಶಾಲೆಗಳಲ್ಲಿ ಕರಕುಶಲ ಮತ್ತು ಉತ್ಪಾದಕ ಕೆಲಸಕ್ಕೆ ಹೆಚ್ಚಿನ ಒತ್ತು ನೀಡಬೇಕು ಎಂದು ನಾವು ಶಿಫಾರಸು ಮಾಡಿದ್ದೇವೆ. ಇದರ ಜೊತೆಗೇ, ಮಾಧ್ಯಮಿಕ ಶಿಕ್ಷಣದ ಹಂತದಲ್ಲಿಯೇ ಪಠ್ಯಕ್ರಮಗಳನ್ನು ಇನ್ನಷ್ಟು ವೈವಿಧ್ಯಗೊಳಿಸಬೇಕು. ಇದರಿಂದ ಬೃಹತ್ ಸಂಖ್ಯೆಯ ವಿದ್ಯಾರ್ಥಿಗಳು ಕೃಷಿ, ತಾಂತ್ರಿಕ, ವಾಣಿಜ್ಯಿಕ ಅಥವಾ ಇತರ ಪ್ರಾಯೋಗಿಕ ಪಠ್ಯಕ್ರಮಗಳನ್ನು ಅಭ್ಯಸಿಸಬಹುದು. ಈ ಪಠ್ಯಕ್ರಮಗಳು ಅವರಲ್ಲಿ ಅಡಗಿರುವ ವಿವಿಧ ಕೌಶಲ್ಯಗಳನ್ನು ತರಬೇತಿಗೊಡ್ಡುತ್ತವೆ ಮತ್ತು ಮಾಧ್ಯಮಿಕ ಪಠ್ಯಕ್ರಮದ ಕೊನೆಯಲ್ಲಿ ಅವರು ವೃತ್ತಿಪರ ಉದ್ಯಮದಲ್ಲಿ ತೊಡಗಲು ಅಥವಾ ಇನ್ನಷ್ಟು ತರಬೇತಿಗೆ ತಾಂತ್ರಿಕ ಸಂಸ್ಥೆಗಳನ್ನು ಸೇರಲು ಸಾಧ್ಯವಾಗುವಂತೆ ಮಾಡುತ್ತವೆ. ಈ ಕ್ರಮಗಳು, ಶಿಕ್ಷಿತ ಯುವಜನತೆ ಮಾನಸಿಕವಾಗಿ ಮತ್ತು ಪ್ರಾಯೋಗಿಕವಾಗಿ ತಾಂತ್ರಿಕ ಮಾರ್ಗಗಳನ್ನು ಅನುಸರಿಸುವಂತೆ ಮಾಡುತ್ತವೆ ಮತ್ತು ದಕ್ಷತೆಯ ಸಾರ್ವಲೌಕಿಕ ಮಾನಕವನ್ನು ಹೆಚ್ಚಿಸುತ್ತವೆ ಹಾಗೂ ಇವೆಲ್ಲದರಿಂದ ರಾಷ್ಟ್ರೀಯ ಸಂಪತ್ತಿನ ವೃದ್ಧಿಗೆ ಮತ್ತು ಅಂತಿಮವಾಗಿ ಜೀವನದ ಸಾಮಾನ್ಯ ಮಟ್ಟವನ್ನು ಸುಧಾರಿಸಲು ದಾರಿಮಾಡಿಕೊಡುತ್ತವೆ ಎಂಬುದು ನಮ್ಮ ನಂಬಿಕೆಯಾಗಿದೆ.

ವ್ಯಕ್ತಿತ್ವದ ಬೆಳವಣಿಗೆ

ಮಾಧ್ಯಮಿಕ ಶಿಕ್ಷಣದ ಮೂರನೇ ಬಹುಮುಖ್ಯ ಕೆಲಸವೆಂದರೆ ವಿದ್ಯಾರ್ಥಿಗಳಲ್ಲಿ ಇರುವ ಸೃಷ್ಟಿಶೀಲ ಶಕ್ತಿಯ ಮೂಲಗಳ ಬಿಡುಗಡೆಗೆ ದಾರಿ ಮಾಡಿಕೊಡುವುದು. ಇದರಿಂದ ವಿದ್ಯಾರ್ಥಿಗಳು ತಮ್ಮ ಸಾಂಸ್ಕೃತಿಕ ಪರಂಪರೆಯ ಮೌಲ್ಯವನ್ನು ಗ್ರಹಿಸಲು ಸಾಧ್ಯವಾಗಬಹುದು ಮತ್ತು ಅವರು ತಮ್ಮ ವಿರಾಮದ ಅವಧಿಯಲ್ಲಿ ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಳ್ಳಲು ಹಾಗೂ ತಮ್ಮ ಮುಂದಿನ ಜೀವನದಲ್ಲಿ ಈ ಪರಂಪರೆಯ ಅಭಿವೃದ್ಧಿಗೆ ಕೊಡುಗೆಯನ್ನು ನೀಡಲು ಸಾಧ್ಯವಾಗಬಹುದು. ಹಿಂದಿನ ಕಾಲದಲ್ಲಿ, ನಮ್ಮ ಶಾಲೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ಬೆಳವಣಿಗೆಯಂತಹ ವಿಷಯದ ಬಗ್ಗೆ ಗಮನ ಹಾಗೂ ಪ್ರೋತ್ಸಾಹವನ್ನು ನೀಡಲಿಲ್ಲ. ಅವರ ಭಾವನಾತ್ಮಕ ಬದುಕಿನ ಬಗ್ಗೆ, ಅವರ ಸಾಮಾಜಿಕ ಪ್ರೇರಣೆಗಳು, ರಚನಾತ್ಮಕ ಪ್ರತಿಭೆಗಳು ಮತ್ತು ಕಲಾತ್ಮಕ ಅಭಿರುಚಿಗಳ ಬಗೆಗೆ ಉತ್ತೇಜನ ನೀಡಲಿಲ್ಲ. ಹಾಗಾಗಿ ಬಹುತೇಕ ವಿದ್ಯಾರ್ಥಿಗಳು ತಮ್ಮಲ್ಲೇ ಇರುವ ಆಂತರಿಕ ಸಂಪನ್ಮೂಲಗಳಿಂದ ಹೊರಹೊಮ್ಮಲು ಸಾಧ್ಯವಾಗಲಿಲ್ಲ ಅಥವಾ ಅವರಲ್ಲಿರುವ ಆಸಕ್ತಿಗಳನ್ನು ಬೆಳೆಸಲು ಮತ್ತು ಅವುಗಳನ್ನು ಅಪ್ಯಾಯಮಾನ ಅಥವಾ ಉಪಯುಕ್ತ ಹವ್ಯಾಸಗಳಾಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನಮ್ಮ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿರುವ ಇಂತಹ ಗಂಭೀರ ಕೊರತೆಗಳ ಹಿನ್ನೆಲೆಯಲ್ಲಿ, 'ಪಠ್ಯಕ್ರಮ' ಎಂಬ ಅಧ್ಯಾಯದಲ್ಲಿ ನಾವು ಕಲೆ, ಕರಕುಶಲಕಲೆ, ಸಂಗೀತ, ನೃತ್ಯ ಮತ್ತು ಇತರ ಹವ್ಯಾಸಗಳ ಅಭಿವೃದ್ಧಿಗೆ ಗೌರವದ ಸ್ಥಾನ ಕಲ್ಪಿಸಬೇಕು ಎಂದು ಶಿಫಾರಸು ಮಾಡಿದ್ದೇವೆ. ಶಿಕ್ಷಣವು ಸ್ವತಂತ್ರ ನೆಲೆಗಟ್ಟಿನಲ್ಲಿ ವ್ಯವಸ್ಥಿತಗೊಂಡಿರುವುದರಿಂದ ಮತ್ತು ಅನೇಕ ವಿಷಯಗಳು ಮತ್ತು ಚಟುವಟಿಕೆಗಳನ್ನು ಒಳಗೊಳ್ಳುವಂತೆ ಅದರ ವ್ಯಾಪ್ತಿಯನ್ನು ವಿಸ್ತೃತಗೊಳಿಸಿರುವುದರಿಂದ, ವಿದ್ಯಾರ್ಥಿಗಳು ಕಲೆ ಮತ್ತು ನಿಸರ್ಗದ ಜಗತ್ತಿನ ಅನೇಕ ಪ್ರಚೋದನೆಗಳಿಗೆ ತಕ್ಷಣ ಸ್ಪಂದಿಸುವ ಮನಸ್ಸು ಮತ್ತು ಸಂವೇದನಾಶೀಲತೆಯೊಂದಿಗೆ ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಹೆಚ್ಚಿನ ಉತ್ಸುಕತೆಯಿಂದ ಆನಂದಿಸುವುದು ಮಾತ್ರವಲ್ಲದೆ ಅದನ್ನು ಸಮೃದ್ಧಗೊಳಿಸುವಲ್ಲಿಯೂ ಸಹಾಯಕರಾಗಬಹುದು ಎಂಬುದು ನಮ್ಮ ಆಶಯವಾಗಿದೆ.

ನಾಯಕತ್ವಕ್ಕಾಗಿ ಶಿಕ್ಷಣ

ಈ ಗುರಿಗಳನ್ನು ಚರ್ಚಿಸುವ ಸಂದರ್ಭದಲ್ಲಿ, ಶಿಕ್ಷಣದ ಈ ನಿರ್ದಿಷ್ಟ ಘಟ್ಟದ ವಿಶೇಷ ಲಕ್ಷಣಗಳನ್ನು ಗಮನದಲ್ಲಿ ಇಟ್ಟುಕೊಳ್ಳುವುದು ಮುಖ್ಯವಾಗುತ್ತದೆ. ಮಾಧ್ಯಮಿಕ ಶಿಕ್ಷಣವು ತನ್ನ ಸಿದ್ಧಾಂತ ಮತ್ತು ವಿಧಾನದಿಂದ ಸಮೂಹ ಮಟ್ಟದಲ್ಲಿ ನೀಡಲಾಗುವ ಶಿಕ್ಷಣದಿಂದ ಮುಂದಕ್ಕೆ ಬೆಳೆಯಬೇಕು ಮತ್ತು ಅದರ ಜೊತೆಗೇ ಮೂಲ ಶಿಕ್ಷಣದೊಂದಿಗೆ ನಿಕಟವಾಗಿ ಏಕೀಕೃತಗೊಳ್ಳಬೇಕು. ಮೂಲ ಶಿಕ್ಷಣದಿಂದ ಅಥವಾ ಕ್ರಿಯಾಶೀಲತೆಯಿಂದ ಪ್ರೇರಿತವಾದ ಪ್ರಾಥಮಿಕ ಶಾಲೆಯನ್ನು ದಾಟಿದ ಸಂದರ್ಭದಲ್ಲಿ, ಕಾರ್ಯನಿರ್ವಹಣೆಯ ವಿಧಾನಗಳಲ್ಲಿ ಮತ್ತು ಬೋಧನಾ ಕ್ರಮದಲ್ಲಿ ಅಥವಾ ಪಠ್ಯಕ್ರಮದ ಪರಿಕಲ್ಪನೆಯಲ್ಲಿ ತೀವ್ರತರದ ಉಲ್ಲಂಘನೆ ಮಾಡಲಾಗಿದೆ ಎಂಬ ಭಾವನೆ ವಿದ್ಯಾರ್ಥಿಗೆ ಬರಬಾರದು. ಉತ್ಪಾದಕ ಕೆಲಸ, ಪಠ್ಯಕ್ರಮಕ್ಕೆ ಬದುಕಿನೊಂದಿಗೆ ಹಾಗೂ ಸಮುದಾಯ ಜೀವನಕ್ಕೆ ಸಮುದಾಯ ಸೇವೆಯೊಂದಿಗೆ ಇರುವ ಅತಿಮುಖ್ಯವಾದ ಸಂಬಂಧವನ್ನು ಕುರಿತ ಚಿಂತನೆಗಳೆಲ್ಲವೂ ಅದರಲ್ಲಿ ಸ್ಥಾನ ಪಡೆಯಬೇಕು, ಹರೆಯದ ಮನಃಶಾಸ್ತ್ರದ ನಿಟ್ಟಿನ ಅಗತ್ಯಗಳಿಗೆ ತಕ್ಕಂತೆ ಇಂತಹ ಮಾರ್ಪಾಡುಗಳನ್ನು ಮಾಡುವುದು ಅಗತ್ಯವಾಗುತ್ತದೆ. ಎರಡನೆಯದಾಗಿ, ಉನ್ನತ ಶಿಕ್ಷಣಕ್ಕೆ ಏರುವ ಹಂತದಲ್ಲಿ, ವಿಶ್ವವಿದ್ಯಾಲಯದ ಮಟ್ಟದಲ್ಲಿ ಸ್ವತಂತ್ರವಾಗಿ ಕೆಲಸ ಮಾಡಲು ಬೇಕಾದ ಜ್ಞಾನ ಮತ್ತು ಕೌಶಲ್ಯ ಹಾಗೂ ಮಾನಸಿಕ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು ಎಂಬ ಯಥೋಚಿತ ಅಪೇಕ್ಷೆಯನ್ನೂ ಕಾಣಬಹುದಾಗಿದೆ. ಆದರೆ, ಬೇರೆಡೆ ಪ್ರಸ್ತಾಪಮಾಡಿರುವಂತೆ, ಮಾಧ್ಯಮಿಕ ಶಿಕ್ಷಣದ ಒಟ್ಟಾರೆ ಸಮಗ್ರತೆ ಮತ್ತು ಅದರ ಬಗೆಗೆ ಶಿಕ್ಷಕರು ಹಾಗೂ ಪೋಷಕರ ಒಟ್ಟಾರೆ ದೃಷ್ಟಿಕೋನವು ನಿಜಕ್ಕೂ ಅದನ್ನು ಕಲುಷಿತಗೊಳಿಸಿದೆ. ಏಕೆಂದರೆ, ಅದನ್ನು ಅವರು ವಿಶ್ವವಿದ್ಯಾಲಯದ ಹಂತಕ್ಕೆ ಏರಲು ಇರುವ ಮೆಟ್ಟಿಲು ಎಂದೇ ಪರಿಗಣಿಸಿದ್ದಾರೆ. ಇದರ ಪರಿಣಾಮವಾಗಿ, ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದು ವಿಶ್ವವಿದ್ಯಾಲಯಕ್ಕೆ ರಹದಾರಿ ಪಡೆದಂತೆ ಎಂಬ ರೀತಿಯಲ್ಲಿ ಇದನ್ನು ಸಜ್ಜುಗೊಳಿಸಲಾಗುತ್ತದೆ. ಇದರಿಂದಾಗಿ ಅನಿವಾರ್ಯವಾಗಿ ಇತರ ಅನೇಕ ಪ್ರಮುಖ ಗುರಿಗಳನ್ನು ನಿರ್ಲಕ್ಷಿಸಿದಂತೆ ಅಥವಾ ಕಡೆಗಣಿಸಿದಂತೆ ಆಗಿದೆ. ಇಲ್ಲಿ ನೆನಪಿಡಬೇಕಾದ ಇನ್ನೊಂದು ಸಂಗತಿ ಎಂದರೆ ಇದು ಬಹುಪಾಲು ವಿದ್ಯಾರ್ಥಿಗಳಿಗೆ ಅವರ ಔಪಚಾರಿಕ ಶಿಕ್ಷಣದ ಸಮಾಪ್ತಿಯನ್ನು ಸಂಕೇತಿಸುತ್ತದೆ. ಹಾಗಾಗಿ ಈ ಹಂತದ ಶಿಕ್ಷಣವು ತನ್ನದೇ ಆದ ಲಕ್ಷ್ಯ ಮತ್ತು ವಿಶೇಷ ಉದ್ದೇಶಗಳೊಂದಿಗೆ ಸಮಾಪ್ತಿಗೊಳ್ಳಬೇಕು ಎಂಬ ಪ್ರಾಥಮಿಕ ಅಭಿಪ್ರಾಯ ನಮ್ಮದಾಗಬೇಕು. ಮಾಧ್ಯಮಿಕ ಶಿಕ್ಷಣವನ್ನು ದಾಟಿ ಬಂದ ಇಂತಹ ವಿದ್ಯಾರ್ಥಿಗಳು ಕಾಲೇಜು ಅಥವಾ ತಾಂತ್ರಿಕ ಸಂಸ್ಥೆಗಳಿಗೆ ಸೇರ್ಪಡೆಗೊಳ್ಳಲು ಉದ್ದೇಶಿಸಿಲ್ಲವಾದರೆ ಜೀವನದ ನಾನಾ ಮಜಲುಗಳಿಗೆ ಪ್ರವೇಶಿಸಲು ಶಕ್ತರಾಗತಕ್ಕದ್ದು ಮತ್ತು ಮಧ್ಯಂತರ ಹಂತದಲ್ಲಿ ಅವರು ನಾಯಕತ್ವದ ಪಾತ್ರವನ್ನು ನಿರ್ವಹಿಸಬೇಕು. ಒಂದು ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಕೇವಲ ಒಂದು ವರ್ಗದ ಜನ ಮಾತ್ರವಲ್ಲದೆ ಎಲ್ಲ ವರ್ಗಗಳ ಜನರೂ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು. ಅಂತಹ ತರಬೇತಿಯ ಅಗತ್ಯ ಅವರಿಗೆ ಇರುತ್ತದೆ. ಇದರಲ್ಲಿ ಶಿಸ್ತು ಮತ್ತು ನಾಯಕತ್ವದ ತರಬೇತಿಯೂ ಸೇರಿರುತ್ತದೆ. ಪ್ರಾಥಮಿಕ ಅಥವಾ ಮೂಲ ಶಿಕ್ಷಣದಲ್ಲಿ ಕೆಲಸದ ಬಗೆಗಿನ ಶಿಸ್ತನ್ನು ಹೇಳಿಕೊಟ್ಟರೆ, ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ಜೀವನದ ನಾನಾ ಹಂತಗಳಲ್ಲಿ ಉನ್ನತ ಮಟ್ಟದ ನಾಯಕತ್ವದ ಬಗೆಗೆ ತರಬೇತಿಯನ್ನು ನೀಡಬೇಕು. ಈ ಹಿನ್ನೆಲೆಯಲ್ಲಿ ಮಾಧ್ಯಮಿಕ ಶಿಕ್ಷಣದ ವಿಶೇಷ ಕಾರ್ಯವು ಹೇಗಿರಬೇಕೆಂದರೆ ಅವರು ಸಾಮಾಜಿಕ, ರಾಜಕೀಯ, ಕೈಗಾರಿಕೆ ಅಥವಾ ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ನಾಯಕತ್ವದ ಜವಾಬ್ದಾರಿ ವಹಿಸಿಕೊಳ್ಳುವಂತೆ ತರಬೇತಿ ನೀಡಬೇಕು. ಈ ನಾಯಕತ್ವದ ಜವಾಬ್ದಾರಿಗಳನ್ನು ತಮ್ಮದೇ ಸಮುದಾಯದ ಅಥವಾ ಪ್ರದೇಶದ ಸಣ್ಣ ಗುಂಪುಗಳಲ್ಲಿ ನಿರ್ವಹಿಸಲು ಅವರು ಶಕ್ತರಾಗಬೇಕು. ಇದರ ಅರ್ಥ, ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ನಾಯಕತ್ವವನ್ನು ಬೆಳೆಸುವುದಿಲ್ಲ ಎಂದೇನೂ ಅಲ್ಲ, ಪ್ರಜಾಪ್ರಭುತ್ವದ ಸಮರ್ಪಕವಾದ ಕಾರ್ಯನಿರ್ವಹಣೆಯಿಂದ ನಾಯಕತ್ವವು ಹೆಚ್ಚಾಗಿ ಜನಸಮೂಹದಿಂದಲೇ ರೂಪುಗೊಳ್ಳಬೇಕು. ಆದರೆ ವಿಶಾಲ ಅರ್ಥದಲ್ಲಿ ನಾಯಕತ್ವ (ರಾಜಕೀಯ ನಾಯಕತ್ವ ಎಂದು ಪರಿಗಣಿಸಬೇಕಾಗಿಲ್ಲ) ಎಂಬ ಪದವು, ಉನ್ನತ ಗುಣಮಟ್ಟದ ಶಿಕ್ಷಣ, ಸಾಮಾಜಿಕ ವಿಷಯಗಳನ್ನು ಸ್ಪಷ್ಟವಾಗಿ ಹಾಗೂ ಆಳವಾಗಿ ಅರ್ಥಮಾಡಿಕೊಳ್ಳುವುದು ಮತ್ತು ಅತ್ಯುತ್ತಮ ತಾಂತ್ರಿಕ ದಕ್ಷತೆಯ ಪ್ರತೀಕವಾಗಿರುತ್ತದೆ. ಇವೆಲ್ಲವನ್ನೂ ನಮ್ಮ ಮಾಧ್ಯಮಿಕ ಶಿಕ್ಷಣವು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಬೇಕು. ತನ್ನ ವಿದ್ಯಾರ್ಥಿಗಳಿಗೆ ನಾಗರಿಕ ಹಾಗೂ ವೃತ್ತಿಪರ ದಕ್ಷತೆಯನ್ನು ಒದಗಿಸುವ ಜವಾಬ್ದಾರಿ ಮಾಧ್ಯಮಿಕ ಶಿಕ್ಷಣದ ಮೇಲಿದೆ. ಇದರ ಜೊತೆಗೆ ಉತ್ತಮ ನಡವಳಿಕೆಗಳನ್ನೂ ಅಳವಡಿಸಿಕೊಳ್ಳುವಂತೆ ಮಾಡಿದರೆ ಅವರು ರಾಷ್ಟ್ರೀಯ ಜೀವನದ ಸುಧಾರಣೆಯಲ್ಲಿ ಮೌಲ್ಯಯುತವಾದ ಹಾಗೂ ಸ್ಪರ್ಧಾತ್ಮಕವಾದ ಪಾತ್ರವನ್ನು ನಿರ್ವಹಿಸಲು

ಸಾಧ್ಯವಾಗುತ್ತದೆ. ಇದರಿಂದ ಅವರು ತಮಗೆ ತಾವೇ ಏನನ್ನೂ ಮಾಡಲಾಗದ ಅಸಹಾಯಕ, ಆಲಸಿ ವ್ಯಕ್ತಿಗಳಾಗಿ ಹೊರಹೊಮ್ಮುವುದು ತಪ್ಪುತ್ತದೆ. ಅಂಥವರು ಕೊನೆಯ ಮತ್ತು ಮನಸ್ಸಿಲ್ಲದ ಆಶ್ರಯವಾಗಿ ಕಾಲೇಜುಗಳಲ್ಲಿ ದಟ್ಟೈಸುತ್ತಾರೆ. ಅಂತಿಮವಾಗಿ ಅವರಲ್ಲಿ ಬಹುತೇಕರು ಯಾವುದೇ ಸ್ವಾಭಾವಿಕ ಒಲ್ಲವು ಇಲ್ಲದ ಕಾರಕೂನರ ಅಥವಾ ಬೋಧನಾ ವೃತ್ತಿಯನ್ನು ಆಯ್ಕೆಮಾಡಿಕೊಳ್ಳುತ್ತಾರೆ. ರಾಷ್ಟ್ರದ ಅರ್ಥವ್ಯವಸ್ಥೆಯು ಈಗಲೂ ಸಾಕಷ್ಟು ಪಕ್ವಗೊಂಡಿಲ್ಲ ಮತ್ತು ಶಿಕ್ಷಿತ ಯುವಕರಿಗೆ ಸಾಕಷ್ಟು ಸಿದ್ಧವಾದ ಉದ್ಯೋಗದ ಅವಕಾಶಗಳೂ ಇಲ್ಲ ಎಂಬುದು ಸತ್ಯ. ಹೊಸ ಉಪಕ್ರಮವನ್ನು ಅಭಿವೃದ್ಧಿಪಡಿಸುವ, ವ್ಯವಹಾರ ಚಾತುರ್ಯ ಮತ್ತು ಪ್ರಾಯೋಗಿಕ ಕೌಶಲ್ಯವನ್ನು ಬೆಳೆಸುವ ನಿಟ್ಟಿನ ತರಬೇತಿಯ ವೈಫಲ್ಯ ಹಾಗೂ ಹೊಸ ಉದ್ಯೋಗಗಳ ಬಗೆಗೆ ಪ್ರಯತ್ನಮಾಡುವುದಕ್ಕೆ ಬದಲಾಗಿ ಪರಿಸ್ಥಿತಿ ಹೇಗಿದೆಯೋ ಹಾಗೆ ಸ್ವೀಕರಿಸುವ ಜಡತ್ವವು, ಈ ಉದ್ಯೋಗ ಅಭಾವದ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುತ್ತದೆ. ಪರಿಸ್ಥಿತಿ ಏನೇ ಇದ್ದರೂ ಕೂಡ, ಹೊಸ ಯೋಜನೆಗಳು ಲಭ್ಯವಿದ್ದು, ಈ ಪರಿಸ್ಥಿತಿಯು ಸುಧಾರಿಸುತ್ತಿದೆಯಲ್ಲದೆ, ಅವಕಾಶಗಳ ವಿಸ್ತಾರಶೀಲ ಕಾರ್ಯಕ್ಷೇತ್ರಕ್ಕೆ ಕಾರ್ಯಕ್ಷಮತೆಯುಳ್ಳ ವ್ಯಕ್ತಿಗಳಿಗೆ ತರಬೇತಿ ನೀಡುವತ್ತ ಮಾಧ್ಯಮಿಕ ಶಿಕ್ಷಣವು ಗಮನಹರಿಸತಕ್ಕದ್ದು.